ಇದರಿಂದ ಜನರಿಗೆ, ಬಲಿಷ್ಠರು, ಪಟ್ಟಭದ್ರ ಹಿತಾಸಕ್ತಿಗಳು ಏನು ಮಾಡಿದರೂ ರಕ್ಷಣೆ ಸಿಗುತ್ತದೆ ಎನ್ನುವ ಭಾವನೆ ಬರುತ್ತದೆ. ದಯಮಾಡಿ ಈ ಭಾವನೆ ಹೋಗಲಾಡಿಸಬೇಕಾದರೆ ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಸರ್ಕಾರ ನಿಯಮ ಉಲ್ಲಂಘನೆ ಮಾಡಿದಾಗ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಟಿ.ಎಂ.ಮಂಜುನಾಥ್(ಲಾಟರಿ ಮತ್ತು ಸಣ್ಣ ಉಳಿತಾಯ ಸಚಿವರು):-ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವಿಚಾರವನ್ನು ದಿನಾಂಕ26-3-92ರ ಸಂಜೆ ತಿಳಿಸಿದ್ದರಿಂದ ಉತ್ತರಗಳನ್ನು ಸಲ್ಲಿಸಲು ಆಗುವುದಿಲ್ಲ. ಆದುದರಿಂದ ಮಾನ್ಯ ಶಾಸಕಿಯವರ ಜೊತೆ ಚರ್ಚಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಬಯಸುತ್ತೇನೆ.

5. ಹಿಂದುಳಿದ ವರ್ಗಗಳಾದ ಗಂಗಾಮತ, ಅಂಬಿಗ, ಕಬ್ಬಲಿಗ, ಮೊಗವೀರ, ಮೀನುಗಾರರಿಗೆ ಸರ್ಕಾರಿ ನೌಕರಿಗಳಲ್ಲಿ ಆದ್ಯತೆ :-

ಶ್ರೀ ಬಾಬುರಾವ್ ಚಿಂಚನಸೂರ್ (ಚಿತ್ತಾಪುರ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಹಿಂದುಳಿದ ವರ್ಗಗಳಾದ ಕುರುಬ, ಕಾಡು ಕುರುಬ, ಜೇನು ಕುರುಬ, ಕುಲಬಾಂಧವರನ್ನು ಹಾಗೂ ಬೇಡ ವಾಲ್ಮೀಕಿ ಈ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಿದ್ದು, ಕರ್ನಾಟಕ ರಾಜ್ಯದಲ್ಲಿ ಸುಮಾರು25 ಲಕ್ಷ ಕೂಲಿ, ಗಂಗಾಮತ, ಅಂಬಿಗ, ಕಬ್ಬಲಿಗ, ಮೀನುಗಾರರು, ಮೋಗವೀರರು, ಹಾಗೂ ಬೆಸ್ತರು ಇದ್ದು ಅವರು ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದಿದ್ದು ಹಾಗೂ ಸರ್ಕಾರಿ ಹುದ್ದೆಯಲ್ಲಿ ಒಂದು ಪರ್ಸೆಂಟ್ ನೌಕರಿ ಇಲ್ಲದೆ ಅತ್ಯಂತ ಹೀನಮಯ ಸ್ಥಿತಿಯಲ್ಲಿದ್ದಾರೆ. ಈ ವರ್ಗವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಸುಮಾರು ಎರಡು ವರ್ಷಗಳಿಂದಲೂ ಮನವಿಗಳನ್ನು ಸಲ್ಲಿಸುತ್ತಾ ಬಂದರೂ ಅದರ ಬಗ್ಗೆ ಸರ್ಕಾರ ಗಮನಹರಿಸದಿರುವುದರ ಬಗ್ಗೆ ಹಾಗೂ ಈ ಕಡು ಬಡವರ ಕಣ್ಣೀರಿನ ಗೋಳು ಸರ್ಕಾರಕ್ಕೆ ಗೊತ್ತಿದೆಯೆ?

ಶ್ರೀ ಬಿ.ಶಿವಣ್ಣ:(ಸಮಾಜ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಹೇಳಿಕೆ.

ಹಿಂದುಳಿದ ವರ್ಗಕ್ಕೆ ಸೇರಿದ ಗಂಗಾಮತ, ಅಂಬಿಗ, ಕಬ್ಬಲಿಗ, ಮೊಗವೀರ, ಬೆಸ್ತ ಮತ್ತು ಮೀನುಗಾರ ಇವರುಗಳು ಸರ್ಕಾರಿ ಆದೇಶ ಸಂಖ್ಯೆ ಸಕಕಾ 66ಬಿಸಿಎ 86, ದಿನಾಂಕ 13-10-1986ರ ಅನ್ವಯ 'ಬಿ' ಗುಂಪಿಗೆ ಸೇರಿದವರಾಗಿರುತ್ತಾರೆ. ಭಾರತ ಸಂವಿಧಾನದ 16 (4)ನೇ ಅನುಚ್ಛೇದದ ಮೇರೆಗೆ ಇರುವ ಶೇಕಡ 13ರ ಮೀಸಲಾತಿಯ ಅಡಿಯಲ್ಲಿ ಈ ವರ್ಗದ ಜನರೂ ಸಹ ನೇಮಕಾತಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಯಾವುದೇ ಜಾತಿಯನ್ನು ಸೇರಿಸುವ ಅಧಿಕಾರ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ತಮ್ಮನ್ನು ಪರಿಶಿಷ್ಟ ಜಾತಿಯೆಂದು ಪರಿಗಣಿಸುವಂತೆ ಕೋರಿ ಈ ಮೇಲೆ ತಿಳಿಸಿದ ಜಾತಿಗಳವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಇದೇ ರೀತಿ ಹಲವಾರು ಜಾತಿಗಳವರು ತಮ್ಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಕೋರಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದು, ಈ ಮನವಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸರ್ಕಾರ ಒಂದು ಸಮಿತಿಯನ್ನು ರಚಿಸಿದೆ. ಈ ಮೇಲೆ ಹೇಳಿದ ಜಾತಿಗಳವರ ಮನವಿಯನ್ನು ಸಹಾ ಈ ಸಮಿತಿಯ ಮುಂದೆ ಈಗಾಗಲೇ ಮಂಡಿಸಲಾಗಿದೆ. ಸದರಿ ಸಮಿತಿಯು ನೀಡುವ ವರದಿಯನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ಸೂಕ್ತವಾಗಿ ಶಿಫಾರಸ್ಸು ಮಾಡಲಾಗುವುದು.

6. ಬೆಂಗಳೂರು ನಗರದ ಖಾಸಗಿ ಕಾಲೇಜುಗಳ ಅಧ್ಯಾಪಕರು, ಬೋಧಕರು, ಖಾಸಗಿಯಾಗಿ (ಮನೆ ಪಾಠ) ಪಾಠ ಪ್ರವಚನ ಮಾಡಕೂಡದೆಂದು ಆದೇಶ.

ಶ್ರೀ ಕೆ.ಲಕ್ಕಣ್ಣ:(ರಾಜಾಜಿನಗರ):- ಮಾನ್ಯ ಉಪಾಧ್ಯಕ್ಷರೆಯವರೆ, ಬೆಂಗಳೂರು ನಗರದ ಖಾಸಗಿ ಕಾಲೇಜುಗಳ ಪ್ರಾಧ್ಯಾಪಕರು, ಬೋಧಕರು ಕಾಲೇಜಿನ ಕೆಲಸದ ವೇಳೆಯಲ್ಲಿ ಸಮರ್ಪಕ ಸೇವೆ ಸಲ್ಲಿಸಿ ಬಿಡುವಿನ ವೇಳೆಯಲ್ಲಿ ಖಾಸಗಿಯಾಗಿ ಸ್ವ ಇಚ್ಛೆಯಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದರು. ಇದರಿಂದ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತಿತ್ತು. ಆದರೆ ಈ ರೀತಿ ಖಾಸಗಿಯಾಗಿ ಪಾಠ ಹೇಳಿ ಕೊಡುವವರು ಕಾಲೇಜುಗಳಲ್ಲಿ ಸರಿಯಾಗಿ ಬೋಧನೆ ಮಾಡುವುದಿಲ್ಲವೆಂದು ದೂರುಗಳು ಬಂದಿದ್ದರಿಂದ ಖಾಸಗಿಯಾಗಿ ಯಾರೂ ಪಾಠ ಪ್ರವಚನ ಮಾಡಕೂಡದೆಂದು ಆದೇಶ ನೀಡಿರುವುದಾಗಿ ತಿಳಿದು ಬಂದಿದೆ. ಇದಕ್ಕೆ ಬದಲಾಗಿ ಆಯಾಯ ಕಾಲೇಜಿನ ಪ್ರಿನ್ಸಿಪಾಲರನ್ನು ಅಥವಾ ಕಾರ್ಯದರ್ಶಿಯವರನ್ನು ವಿಚಾರಿಸಿ ಪ್ರಾಧ್ಯಾಪಕರು ಮತ್ತು ಬೋಧಕರು ಸರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೋ, ಇಲ್ಲವೋ ಎಂಬುದನ್ನು ತಿಳಿದು ಆ ರೀತಿ ಕರ್ತವ್ಯ ಲೋಪ ಮಾಡುವಂಥವರು ಖಾಸಗಿಯಾಗಿ ಬೋಧನೆ ಮಾಡಕೂಡದೆಂದು ಆದೇಶ ನೀಡಬೇಕು. ವೈದ್ಯರು ಮತ್ತು ಇಂಜಿನಿಯರ್‌ಗಳು ಖಾಸಗಿಯಾಗಿ ಬೇರೆ ಕಡೆ ಕೆಲಸ ಮಾಡಬಾರದೆಂದು ಆದೇಶವಿದ್ದರೂ ಕೂಡ ಇನ್ನೂ ಅನೇಕ ಜನ ವೈದ್ಯರು, ಇಂಜಿನಿಯರ್‌ಗಳೂ ಖಾಸಗಿಯಾಗಿ ಕೆಲಸ ಮಾಡುತ್ತಲೇ ಇದ್ದಾರೆ. ಆದರೆ ಈ ಬಡಪಾಯಿ ಬೋಧಕರು ಮತ್ತು ಪ್ರಾಧ್ಯಾಪಕರ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ಕನಿಕರ ತೋರಿಸಿ ಖಾಸಗಿ ಕಾಲೇಜುಗಳವರು ತಮ್ಮ ಬಿಡುವಿನ ವೇಳೆಯಲ್ಲಿ ಖಾಸಗಿಯಾಗಿ ಬೋಧನೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿ ಈ ಮೂಲಕ ಮಾನ್ಯ ವಿದ್ಯಾ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ

ಖಾಸಗಿ ಮನೆಪಾಠಗಳನ್ನು ಹೇಳಿಕೊಡುವ ರೂಢಿಯಿಂದಾಗಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಶ್ರದ್ಧೆ ಮತ್ತು ಕಾರ್ಯದಕ್ಷತೆಗಳ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ಮನಗಂಡು, ಖಾಸಗಿ ಮನೆಪಾಠಗಳನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕಾಲೇಜಿನಲ್ಲಿ ಕನಿಷ್ಠ ಪ್ರತಿದಿನ ಏಳು ಗಂಟೆಗಳ ಹಾಜರಾತಿಯನ್ನು ಅಧ್ಯಾಪಕರಿಂದ ಕಡ್ಡಾಯವಾಗಿ ನಿರೀಕ್ಷಿಸಿದ್ದು ಆ ಸಮಯದಲ್ಲಿ, ವಿದ್ಯಾರ್ಥಿಗಳಿಗೆ ಅಗತ್ಯವಿರುವ ವಿಶೇಷ ಮಾರ್ಗದರ್ಶನವನ್ನು ನೀಡಬಹುದು. ಮನೆಪಾಠದ ರೂಢಿಯಿಂದಾಗಿ ಅಧ್ಯಾಪಕರ ಅಗತ್ಯ ಹಾಜರಾತಿಗೆ ಮತ್ತು ಕರ್ತವ್ಯ ಶ್ರದ್ಧೆಗೆ ಧಕ್ಕೆ ಬರುವ ಸಾಧ್ಯತೆಗಳು ಕಂಡು ಬರುತ್ತಿದೆ.

ಮನೆ ಪಾಠಗಳಿಗೆ ಹೋಗುವ ವಿದ್ಯಾರ್ಥಿಗಳು ನಿಯಮಿತ ತರಗತಿಗಳಲ್ಲಿ ಆಸಕ್ತಿ ತೋರದಿರುವುದೂ ಅಶಿಸ್ತಿಗೆ ಕಾರಣವಾಗುವ ಅಪಾಯವಿರುತ್ತದೆ.

ಇಷ್ಟೇ ಅಲ್ಲದೆ, ಮನೆಪಾಠಗಳು ಒಂದು ವ್ಯಾಪಾರದಂತೆ ಆಗಿದ್ದು ಶಿಕ್ಷಣ ರಂಗದ ನೈತಿಕ ಮಟ್ಟವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದಲೂ ಮನೆಪಾಠದ ನಿಷೇಧ ಅಗತ್ಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪರಿಪತ್ರ ಜೂನ್ 13 ,91 ರಲ್ಲಿ ಪ್ರಕಟವಾಗಿರುವ (ವರ್ತನ ಸಂಹಿತೆ) ಕೋಡ್ ಆಫ್ ಕಾಂಡೆಕ್ಟ್ ಅಧ್ಯಾಯ5-29 (9)ರ ಸರ್ಕಾರಿ ಆದೇಶದ ಸೂಚನೆಯ ಮೇರೆಗೆ ಕಾಲೇಜು ಶಿಕ್ಷಣ ನಿರ್ದೇಶನಾಲಯವು ಮನೆಪಾಠಗಳನ್ನು ತಡೆಯುವ ಬಗ್ಗೆ ಕ್ರಮ ಕೈಗೊಳ್ಳುತ್ತಿದೆ.

7. ಬ್ರಹ್ಮಾವರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭ.

ಶ್ರೀ ಬಸವರಾಜ್:(ಬ್ರಹ್ಮಾವರ್):- ಮಾನ್ಯ ಉಪಾಧ್ಯಕ್ಷರೇ, ನನ್ನ ಕ್ಷೇತ್ರವಾದ ಬ್ರಹ್ಮಾವರವು ಬಹಳಷ್ಟು ಗ್ರಾಮಾಂತರ ಪ್ರದೇಶಗಳಿಂದ ಕೂಡಿದ ಕ್ಷೇತ್ರವಾಗಿದ್ದು ಜಿಲ್ಲಾ ಕೇಂದ್ರವಾದ ಮಂಗಳೂರಿನಿಂದ ಸುಮಾರು 80ಕಿ.ಮೀ. ಅಂತರದಲ್ಲಿದೆ. ದ.ಕ.ಜಿಲ್ಲೆಯಲ್ಲಿನ ಎರಡು ಸರ್ಕಾರಿ ಪಾಲಿಟೆಕ್ನಿಕ್‌ಗಳು ಮಂಗಳೂರಿನಲ್ಲಿಯೇ ಇದ್ದು ಮಂಗಳೂರು ಮತ್ತು ಅದರ ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.